ಓ.ಎಸ್. ನಂ. 56/2014 ಪಿ.ಡಬ್ಲೂ-1 ಹೆಸರು - ಚಿನ್ನಸ್ವಾಮಿ

ಸಾಕ್ಷಿಯನ್ನು ದಿನಾಂಕಃ 25/07/2019 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ. ಎಸ್.ಎಸ್. ವಕೀಲರಿಂದಃ-

ನಾನು ವಿದ್ಯಾವಂತನಲ್ಲ. ನ್ಯಾಯಾಲಯದಿಂದ ನನಗೆ ಸಾಕ್ಷಿ ಹೇಳಲು ಯಾವುದೇ ಸಮನ್ಸ್ ಬಂದಿರುವುದಿಲ್ಲ ವಾದಿಯೇ ನನ್ನನ್ನು ಕರೆದುಕೊಂಡು ಬಂದಿರುತ್ತಾರೆ. ಕೇಸಿನ ಬಗ್ಗೆ ನನಗೆ ಗೊತ್ತಿರುತ್ತದೆ. ವಾದಿಯ ಮಗಳು ನನ್ನ ಹೆಂಡತಿ ಎಂದರೆ ಸರಿ. ದಾವಾ ಆಸ್ತಿಯ ಚೆಕ್ಕುಬಂಧಿಯ ವಿವರ ನನಗೆ ತಿಳಿದಿರುತ್ತದೆ. ದಾವಾ ಆಸ್ತಿಯ ದಕ್ಷಿಣ ಭಾಗಕ್ಕೆ ಬೀರುವಾಳು ನಾಲೆ ಹೋಗಿರುತ್ತದೆ. ಆ ರೀತಿ ಬೀರುವಾಳು ನಾಲೆ 40 ವರ್ಷದಿಂದ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಪೂರ್ವಕ್ಕೆ ಪ್ರತಿವಾದಿಯ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯ ತಾಯಿಯ ಹೆಸರು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ಕುಳ್ಳಪ್ಪನವರ ಜಮೀನು ಇರುತ್ತದೆ. ಪ್ರಮಾಣ ಪತ್ರದಲ್ಲಿ ಬರೆದಿರುವಂತೆ ದಾವಾ ಆಸ್ತಿಯ ಚೆಕ್ಕುಬಂಧಿಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ದಾವಾ ಆಸ್ತಿಯ ಸುತ್ತಮುತ್ತಲಿನಲ್ಲಿ ನನ್ನ ಜಮೀನು ಇರುವುದಿಲ್ಲ ಆದರೆ ನಾನು ಭೋಗ್ಯಕ್ಕೆ ಪಡೆದಿರುತ್ತೇನೆ. ವಾದಿಗೆ ದಾವಾ ಆಸ್ತಿಯು ಯಾವ ರೀತಿ ಬಂತು ಎಂದು ನಾನು ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ವಾದಿಯ ತಂದೆಯನ್ನು ನಾನು ನೋಡಿರುವುದಿಲ್ಲ. ವಾದಿಯ ಅಣ್ಣಂದಿರನ್ನು ನಾನು ನೋಡಿರುತ್ತೇನೆ.

ದಾವಾ ಆಸ್ತಿಯ ಪೂರ್ವಕ್ಕೆ ಪ್ರತಿವಾದಿಯ ತಾಯಿ ಕಾಳಮ್ಮ ರವರು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಪಕ್ಕದ ಜಮೀನಿನ ಕುಳ್ಳಪ್ಪ ವಾದಿಗೆ ಯಾವುದೇ ಸಂಬಂಧ ಇರುವುದಿಲ್ಲ. ವಾದಿಯು ವ್ಯವಸಾಯ ಮಾಡುತ್ತಿರುವ ಜಮೀನು 1 ಎಕರೆ 20 ಗುಂಟೆ ಜಮೀನು ಎಂದರೆ ಸರಿ. ದಾವಾ ಆಸ್ತಿಯ ಸರ್ವೆ ನಂಬರ್ 2 ರಲ್ಲಿ ಬೀರುವಾಳು ನಾಲೆಗೆ ಸ್ವಲ್ಪ ಜಮೀನು ಒತ್ತೂವರಿಯಾಗಿರುತ್ತದೆ ಆದರೆ ಎಷ್ಟು ವಿಸ್ತೀರ್ಣ ಎಂದು ನನಗೆ ಗೊತ್ತಿಲ್ಲ. ಈ ರೀತಿ ಒತ್ತೂವರಿಯಾದ ಕಾರಣ ವಾದಿ ಮತ್ತು ಅವರ ಅಣ್ಣಂದಿರು ಪರಿಹಾರ ಪಡೆದುಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿಯು ದಾವಾ ಆಸ್ತಿಯಲ್ಲಿ ವಾದಿಗೆ ಯಾವುದೇ ರೀತಿ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದ ದಾವಾ ಆಸ್ತಿಯು ಪ್ರತಿವಾದಿ ಅವರದು ಎಂದು ಗಲಾಟೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯು ಎಷ್ಟು ಪೋಡ್ ಆಗಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಸರ್ವೆ ನಂಬರ್ 2 ಒಟ್ಟು ವಿಸ್ತೀರ್ಣ 7 ಎಕರೆ ಇರುತ್ತದೆ. ದಾವಾ ಆಸ್ತಿಯ ದಕ್ಷಿಣಕ್ಕೆ ನಾಲೆ ಇರುತ್ತದೆ ಅದರ ದಕ್ಷಿಣಕ್ಕೆ ಪುಟ್ಟಬುದ್ದಿ , ಮಹದೇವಪ್ಪ ಮತ್ತು ಕಾಳಿಂಗರವರ ಜಮೀನು ಇರುತ್ತದೆ ಎಂದರೆ ಸರಿ. 30 -40 ವರ್ಷದಿಂದ ಇದೇ ರೀತಿ ನಾನು ಹೇಳಿದಂತೆ

ಪುಟ್ಟಬುದ್ದಿ, ಮಹದೇವಪ್ಪ ಮತ್ತು ಕಾಳಿಂಗರವರು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ತೆವರು ಇದೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 2/1 ಯಾರ ಜಮೀನು ಎಂದು ನಾನು ತಿಳಿದುಕೊಂಡಿಲ್ಲ. ವಾದಿಯು ಪ್ರತಿವಾದಿಯ ವಿರುದ್ಧ ಏನು ಕೇಸು ಹಾಕಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ.

ವಾದಿಯು ದಾವಾ ಆಸ್ತಿಯನ್ನು ಹದ್ದುಬಸ್ತು ಮಾಡಿಕೊಂಡಿರುತ್ತಾರೆ ಆದರೆ ಯಾವ ವರ್ಷ ಎಂದು ನನಗೆ ಗೊತ್ತಿಲ್ಲ. ಹದ್ದುಬಸ್ತು ಮಾಡಿಸಿ 40 ವರ್ಷ ಆಗಿರುತ್ತದೆ. ಪ್ರಕರಣ ದಾಖಲಾಗುವ 2 ತಿಂಗಳ ಮುನ್ನ ಯಾವುದೇ ಹದ್ದುಬಸ್ತು ಮಾಡಿಸಿರುವುದಿಲ್ಲ. ಹದ್ದುಬಸ್ತು ಮಾಡುವ ಕಾಲಕ್ಕೆ ನನ್ನ ಮದುವೆ ಆಗಿರುವುದಿಲ್ಲ ಆದ್ದರಿಂದ ಹದ್ದುಬಸ್ತಿನ ಬಗ್ಗೆ ನನಗೆ ತಿಳಿದಿರುವುದಿಲ್ಲ. ದಾವಾ ಆಸ್ತಿಯ ದಕ್ಷಿಣಕ್ಕೆ ಪ್ರತಿವಾದಿ ಕಾಳಮ್ಮನವರ ತಂದೆಯ ಕಡೆಯಿಂದ ದಾನ ಪತ್ರದ ಮುಖಾಂತರ ಅವರಿಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ.. ಕಾಳಮ್ಮ ತೀರಿಕೊಂಡ ನಂತರ ಪ್ರತಿವಾದಿಯು ದಾವಾ ಆಸ್ತಿಯ ದಕ್ಷಿಣಕ್ಕೆ ಪಂಪ್ ಸೆಟ್ ಅನ್ನು ಹಾಕಿಕೊಂಡು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

ಪ್ರತಿವಾದಿಯು ಪುಟ್ಟಬುದ್ದಿ, ಮಹದೇವಪ್ಪ ಮತ್ತು ಕಾಳಿಂಗರವರ ಜಮೀನುಗಳಿಗೆ ತೊಂದರೆಯನ್ನು ಕೊಟ್ಟಿಲ್ಲ ಎಂದರೆ ಸರಿ. ಪ್ರತಿವಾದಿಯು ವಾದಿಯನ್ನು ದಾವಾ ಆಸ್ತಿಯಲ್ಲಿ ವ್ಯವಸಾಯ ಮಾಡಬೇಡ ಎಂದು ಯವತ್ತು ಹೇಳಿಲ್ಲ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ದೂರನ್ನು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಆ ದೂರಿನ ಪ್ರತಿಯನ್ನು ನೋಡಿಲ್ಲ. ನಾನು ವಾದಿಯ ಅಳಿಯನಾದ್ದರಿಂದ ವಾದಿಗೆ ಸಹಾಯ ಮಾಡಲು ಮತ್ತು ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯೇ ಪ್ರತಿವಾದಿಗೆ ತೊಂದರೆ ಕೊಡುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಹಾಕಿರುವ ಪ್ರಮಾಣ ಪತ್ರವನ್ನು ವಾದಿ ಬರೆಯಿಸಿ ನ್ಯಾಯಾಲಯಕ್ಕೆ ಹಾಕಿದ್ದಾರೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ

1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ,
ನಂಜನಗೂಡು